**19 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

**ಬೆಂಗಳೂರು ನಗರ**

| | | |
|---|---|---|
| **ಸಿ.ಸಿ.ನಂಬರ್** | :- | **19341/2023** |
| **ಪಿರ್ಯಾದುದಾರರ ಹೆಸರು** | :- | **ಎಸ್.ವೇಣುಗೋಪಾಲರೆಡ್ಡಿ** |
| | | **-ವಿರುದ್ಧ-** |
| **ಆರೋಪಿಯ ಹೆಸರು** | :- | **ವಿ.ಕೆ.ಎಂಟರ್ ಪ್ರೆಸರ್ಸ್ ಪ್ರೊಪ್ರೈಟರ್ ವಿಜಯಕುಮಾರ್** |

**ಆಪಾದನೆ**

ಆರೋಪಿಯಾದ ನೀವು ಪಿರ್ಯಾದಿಗೆ ಕೊಡಬೇಕಾಗಿದ್ದ ಹಣ ಮರುಪಾವತಿಸಲು **ರೂ.75,00,000/-(ಎಪ್ಪತ್ತೈದು ಲಕ್ಷ) ದ ಚೆಕ್ ನಂಬರುಃ422600, ದಿನಾಂಕಃ 14.10.2022, ಕೆನರಾ ಬ್ಯಾಂಕ್, ಜೆ.ಪಿ. ನಗರ ಶಾಖೆ, ಬೆಂಗಳೂರು** ಎಂದು ನಮೂದಿಸಿರುವ ಚೆಕ್ಕನ್ನು ಪಿರ್ಯಾದಿಗೆ ಕೊಟ್ಟಿದ್ದು ಪಿರ್ಯಾದಿಯು ಸದರಿ ನಿಮ್ಮ ಚೆಕ್ಕನ್ನು ತಮ್ಮ ಖಾತೆ ಇರುವ ಬ್ಯಾಂಕ್‌ಗೆ ನಗದೀಕರಣಕ್ಕೆ ಸಲ್ಲಿಸಿದಾಗ ಬ್ಯಾಂಕಿನವರು **''ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ''** ಎಂಬ ಕಾರಣದಿಂದ ಅಮಾನ್ಯಗೊಳಿಸಿದ್ದು, ನಂತರ ಪಿರ್ಯಾದಿಯು ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆ ಮೂಲಕ **ದಿನಾಂಕಃ 09.01.2023** ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟೀಸು ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್ ಹಣ ಮರುಪಾವತಿ ಮಾಡದೆ ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆ ಕಲಂ 138 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯ ಅಡಿಯಲ್ಲಿ ಎಸಗಿರುತ್ತೀರಿ ಎಂದು ನಿಮ್ಮನ್ನು ಈ ಮೂಲಕ ಆಪಾದಿಸಿರುತ್ತೇನೆ.

**ಪ್ರಶ್ನೆ 1.** ಈ ಆಪಾದನೆಯನ್ನು ನೀವು ಮುಕ್ತವಾಗಿ ಒಪ್ಪಿಕೊಳ್ಳುತ್ತೀರೋ ಅಥವಾ ಪ್ರಕರಣವನ್ನು ನಡೆಸುತ್ತೀರೋ ?

**ಉತ್ತರಃ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕು**

ಮೇಲ್ಕಂಡ ಆಪಾದನೆಯನ್ನು ಈ ದಿನ ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ, ಹೇಳಿ, ತಿಳಿಸಿಕೊಡಲಾಯಿತು. ಸದರಿ ಆಪಾದನೆಯ ಪ್ರಶ್ನೆಗಳ ಉತ್ತರ ಸರಿಯಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

**ದಿನಾಂಕಃ 11.12.2023** **19 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ,**
**ಬೆಂಗಳೂರು.**